# <u>4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು</u>

ಎಸ್‌ಸಿ. 21/2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಸಂಜಯ್ | | <u>ಪ್ರಮಾಣ ಮಾಡಿಸಿದ ದಿನಾಂಕಃ</u> |
| ತಂದೆ/ಗಂಡನ ಹೆಸರು | ಃ ಶ್ರೀ ಕಾಂತರಾಜು | | **05.04.2025** |
| ವಯಸ್ಸು | ಃ 40 ವರ್ಷ | | |
| ವೃತ್ತಿ | ಃ ಹೋಟೆಲ್ ಕೆಲಸ | ಪ್ರಾ.ಸಾ. | ಃ 21 |
| ವಾಸಸ್ಥಳ | ಃ ಮಂಡಿ ಮೊಹಲ್ಲಾ, ಮೈಸೂರು | ಚಾ.ಸಾ. | ಃ 11 |

<u>ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ</u>

. ಅಂದಾಜು *8-10* ವರ್ಷಗಳ ಹಿಂದೆ ಮೈಸೂರಿನ ತಿಲಕ್ ನಗರದ ವೇದಾವತಿ ಎನ್ನುವವರ ಮನೆ ಬಳಿ ಹೋಗುತ್ತಿರುವಾಗ ಪೊಲೀಸರು ನನ್ನನ್ನು ಆ ಮನೆ ಬಳಿ ಕರೆದು ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*34* ಎಂದು ಗುರುತಿಸಿರುವ ಮಹಜರ್ ಆ ಕಾಲಕ್ಕೆ ನಾನು ಸಹಿ ಮಾಡಿದ್ದ ದಾಖಲೆಯಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿಪಿ-*34(ಬಿ)* ಎಂದು ಗುರುತಿಸಿದೆ. ಆ ಕಾಲಕ್ಕೆ ನನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರಲಿಲ್ಲ. ಆ ಕಾಲಕ್ಕೆ ನನಗೆ ಯಾವುದೇ ದಾಖಲೆ ಅಥವಾ ವಸ್ತುಗಳನ್ನು ತೋರಿಸಿಲ್ಲ. ಯಾವ ಪ್ರಕರಣದ ಕುರಿತು ನನ್ನ ಸಹಿಪಡೆದಿದ್ದಾರೆ ಎಂದು ಸಹ ನನಗೆ ಹೇಳಿರಲಿಲ್ಲ. ನಿ.ಪಿ-*34* ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಮತ್ತು ಪೊಲೀಸರ ಮುಂದೆ ನಾನು ಹೇಳಿಕೆ ಕೊಟ್ಟಿಲ್ಲ. ಈಗ ನಾನು ನೋಡುತ್ತಿರುವ ನೋಟಿಸ್ ಮೇಲಿನ ಸಹಿ ನನ್ನದೇ ಇದ್ದು ಅದನ್ನು

ಸಹ ಅದೇ ಕಾಲಕ್ಕೆ ಪಡೆದಿದ್ದರು. ಸದರಿ ನೋಟಿಸ್ ಅನ್ನು ನಿಪಿ-42 ಮತ್ತು ಸಹಿಯನ್ನು ನಿಪಿ-42(ಎ) ಎಂದು ಗುರುತಿಸಿದೆ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

2. ದಿಃ25.06.2015 ರಂದು ಮದ್ಯಾಹ್ನ 1 ರಿಂದ 6 ಗಂಟೆಯಲ್ಲಿ ನನ್ನ ಸಮಕ್ಷಮ ವೇದಾವತಿಯವರ ಮನೆಯಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಈಗ ನಾನು ನೋಡುತ್ತಿರುವ ನಿ.ಪಿ-13 ರಿಂದ 17, 21 ರಿಂದ 23, 26, 28, 29, 41 ಎಂದು ಗುರುತಿಸಿರುವ ದಾಖಲೆಗಳನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕೆ ನಿ.ಪಿ-35 ರಿಂದ 40 ಪೋಟೋಗಳನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ವೇದಾವತಿ ಇವರು ಹೆಚ್ಚಿನ ಬಡ್ಡಿಗೆ ಸಾಲ ಕೊಡುತ್ತಾರೆ ಎನ್ನುವ ಕುರಿತು ದಾಖಲಾಗಿದ್ದ ಪ್ರಕರಣದ ಕುರಿತು ಆ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಜಯಂತ್ ಎನ್ನುವವರು ಸಹ ಹಾಜರಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ದಿಃ25.06.2015 ರಂದು ----------ಗುರುತಿಸುತ್ತೇನೆ ಎಂದು ನನ್ನ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-43 ಎಂದು ಗುರುತಿಸಿದೆ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಕೆ.ಎಸ್.ಆರ್ ರವರಿಂದಃ-</u>**

***3.*** ಪೊಲೀಸರು ನನಗೆ ನೋಟಿಸ್ ಕೊಟ್ಟಿಲ್ಲ. ನಾನು ಕನ್ನಡದಲ್ಲಿ ಸಹಿ ಹಾಕುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಪೊಲೀಸರ ಮುಂದೆ ಸಹಿ ಮಾಡಿದ್ದ ಮುಚ್ಚಳಿಕೆ ಇರುತ್ತದೆ. ಸದರಿ ದಾಖಲೆಯನ್ನು ನಿ.ಡಿ-*3* ಮತ್ತು ಸಹಿಯನ್ನು ನಿ.ಡಿ-*3*(ಎ) ಎಂದು ಗುರುತಿಸಿದೆ. ಅದನ್ನು ಬಿಟ್ಟು ಬೇರೆ ಎಲ್ಲಿಯೂ ಸಹಿ ಹಾಕಿಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು